# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | (925) 78 |
| ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 24.08.2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (KREIS) ವಸತಿ ನಿಲಯಗಳಲ್ಲಿ ಮೃತಪಟ್ಟ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ವೈದ್ಯಕೀಯ, ಆಕಸ್ಮಿಕ ಮತ್ತು ಆತ್ಮಹತ್ಯೆಯಂತಹ ಪ್ರಕರಣಗಳ ಕುರಿತು ಜಿಲ್ಲಾವಾರು ಮಾಹಿತಿ ಒದಗಿಸುವುದು;</td><td>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 (ಪರಿಶಿಷ್ಟ ಜಾತಿ -540, ಪರಿಶಿಷ್ಟ ವರ್ಗ-155 ಹಾಗೂ ಹಿಂದುಳಿದ ವರ್ಗ-179) ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ವಸತಿ ಶಾಲೆ ಕಾಲೇಜುಗಳಿಗೆ 2,24,085 ವಿದ್ಯಾರ್ಥಿಗಳ ಸಂಖ್ಯಾಬಲವಿದ್ದು, ಸದರಿ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸಹಿತ ಆಂಗ್ಲ ಮಾಧ್ಯಮದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ.<br><br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ವಸತಿ ಶಾಲೆ/ಕಾಲೇಜುಗಳಲ್ಲಿ, ವೈದ್ಯಕೀಯ, ಆಕಸ್ಮಿಕ ಮತ್ತು ಆತ್ಮಹತ್ಯೆ ಪ್ರಕರಣಗಳಡಿ ಕಳೆದ 3 ವರ್ಷಗಳಲ್ಲಿ 17 ವಿದ್ಯಾರ್ಥಿಗಳು ಸಾವನ್ನಪ್ಪಿರುತ್ತಾರೆ. ಸದರಿ ಪ್ರಕರಣಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.<br><br>
<table>
<tr><th>ಕ್ರ.ಸಂ</th><th>ಜಿಲ್ಲೆ</th><th>ಒಟ್ಟು ಪ್ರಕರಣಗಳು</th><th>ವೈದ್ಯಕೀಯ ಪ್ರಕರಣ</th><th>ಆಕಸ್ಮಿಕ ಪ್ರಕರಣ</th><th>ಆತ್ಮಹತ್ಯೆ ಪ್ರಕರಣ</th></tr>
<tr><td>1</td><td>ಬಳ್ಳಾರಿ</td><td>1</td><td>1</td><td>0</td><td>0</td></tr>
<tr><td>2</td><td>ಬೆಳಗಾವಿ</td><td>4</td><td>2</td><td>2</td><td>0</td></tr>
<tr><td>3</td><td>ಚಾಮರಾಜನಗರ</td><td>1</td><td>0</td><td>1</td><td>0</td></tr>
<tr><td>4</td><td>ಚಿಕ್ಕಮಗಳೂರು</td><td>2</td><td>0</td><td>1</td><td>1</td></tr>
<tr><td>5</td><td>ಕಲಬುರ್ಗಿ</td><td>1</td><td>0</td><td>0</td><td>1</td></tr>
<tr><td>6</td><td>ಕೋಲಾರ</td><td>4</td><td>0</td><td>4</td><td>0</td></tr>
<tr><td>7</td><td>ಮಂಡ್ಯ</td><td>1</td><td>1</td><td>0</td><td>0</td></tr>
<tr><td>8</td><td>ರಾಯಚೂರ್</td><td>1</td><td>0</td><td>1</td><td>0</td></tr>
<tr><td>9</td><td>ತುಮಕೂರು</td><td>1</td><td>0</td><td>0</td><td>1</td></tr>
<tr><td>10</td><td>ಉತ್ತರ ಕನ್ನಡ</td><td>1</td><td>0</td><td>0</td><td>1</td></tr>
<tr><td></td><td>ಒಟ್ಟು</td><td>17</td><td>4</td><td>9</td><td>4</td></tr>
</table>
<br>ವಸತಿ ಶಾಲೆ, ಕಾಲೇಜುಗಳಲ್ಲಿ ಕಳೆದ 3 ವರ್ಷಗಳಲ್ಲಿ ವಿದ್ಯಾರ್ಥಿಗಳ ಸಾವಿನ ಪ್ರಕರಣದ ವಿವರವಾದ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ರಾಜ್ಯದ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (KREIS) ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ಕಡೆಯ ನೇಮಕಾತಿ ಎಷ್ಟು</td><td>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಬರುವ ವಸತಿ ಶಾಲೆ/ಕಾಲೇಜುಗಳಿಗೆ 20495 (9756 ಬೋಧಕ, 2432 ಬೋಧಕೇತರ, 8307-ಗ್ರೂಪ್-ಡಿ) ಬೋಧಕ, ಬೋಧಕೇತರ ಮತ್ತು ಗ್ರೂಪ್-ಡಿ ವೃಂದದ ಹುದ್ದೆಗಳು ಮಂಜೂರಾಗಿರುತ್ತವೆ. ವಿವರ ಈ ಕೆಳಕಂಡಂತಿದೆ.<br><br>
<table>
<tr><th>ಕ್ರ ಸಂ</th><th>ವೃಂದ</th><th>ಮಂಜೂರಾದ ಹುದ್ದೆಗಳ ಸಂಖ್ಯೆ</th><th>ಭರ್ತಿ</th><th>ಖಾಲಿ ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಬೋಧಕ</td><td>9756</td><td>5430</td><td>4326</td></tr>
<tr><td>2</td><td>ಬೋಧಕೇತರ</td><td>2432</td><td>1100</td><td>1332</td></tr>
</table></td></tr>
</table>

ಹುದ್ದೆಗಳಿಗೆ ಯಾವಾಗ ಜರುಗಿತ್ತು ಪ್ರಸ್ತುತ ಖಾಯಂ ಶಿಕ್ಷಕರು ಹಾಗೂ ಗುತ್ತಿಗೆ ಆಧಾರದ ಶಿಕ್ಷಕರ ಸಂಖ್ಯೆ ಎಷ್ಟು

| | | | | |
|---|---|---|---|---|
| 3 | ಗ್ರೂಪ್ -ಡಿ | 8307 | 8223* | 84 |
| | ಒಟ್ಟು | **20495** | **14753** | **5742** |

*ಆರ್ಥಿಕ ಇಲಾಖೆಯು ಗ್ರೂಪ್-ಡಿ ವೃಂದದ ಹುದ್ದೆಗಳನ್ನು ಹೊರಸಂಪನ್ಮೂಲದ ಮೂಲಕ ಪಡೆಯಲು ತಿಳಿಸಿರುತ್ತದೆ. ಅದರಂತೆ ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿನ ವಸತಿ ಶಾಲೆಗಳಿಗೆ 8092 ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು,ಈ ಪೈಕಿ 4540 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. 3552 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ | ಹುದ್ದೆಯ ಹೆಸರು | ಮಂಜೂರಾತಿ | ಭರ್ತಿ | ಖಾಲಿ |
|---|---|---|---|---|
| 1 | ಕನ್ನಡ ಭಾಷಾ ಶಿಕ್ಷಕರು | 859 | 361 | 498 |
| 2 | ಆಂಗ್ಲ ಭಾಷಾ ಶಿಕ್ಷಕರು | 859 | 345 | 514 |
| 3 | ಹಿಂದಿ ಭಾಷಾ ಶಿಕ್ಷಕರು | 859 | 533 | 326 |
| 4 | ಗಣಿತ ಶಿಕ್ಷಕರು | 859 | 515 | 344 |
| 5 | ವಿಜ್ಞಾನ ಶಿಕ್ಷಕರು. | 885 | 540 | 345 |
| 6 | ಸಮಾಜ ವಿಜ್ಞಾನ | 810 | 521 | 289 |
| 7 | ಕಂಪ್ಯೂಟರ್ ಶಿಕ್ಷಕರು | 806 | 558 | 248 |
| 8 | ದೈಹಿಕ ಶಿಕ್ಷಣ ಶಿಕ್ಷಕರು | 855 | 512 | 343 |
| 9 | ಚಿತ್ರಕಲಾ ಶಿಕ್ಷಕರು | 791 | 438 | 353 |
| 10 | ಸಂಗೀತ ಶಿಕ್ಷಕರು | 509 | 217 | 292 |
| | **ಒಟ್ಟು** | 8092 | 4540 | 3552 |

ಖಾಲಿ ಇರುವ ಬೋಧಕ ಹುದ್ದೆಗಳ ಎದುರಾಗಿ ಜಿಲ್ಲಾ ಹಂತದಲ್ಲಿ ಅತಿಥಿ ಶಿಕ್ಷಕರು/ಉಪನ್ಯಾಸಕರುಗಳನ್ನು ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆ ಹಾಗೂ ಆದೇಶಗಳನ್ನು ಅನುಸರಿಸಿ ತಾತ್ಕಾಲಿಕವಾಗಿ ವಸತಿ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತದೆ ಹಾಗೂ ಬೋಧಕೇತರ ಹುದ್ದೆಗಳ ಸೇವೆಯನ್ನು ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ತಾತ್ಕಾಲಿಕವಾಗಿ ಪಡೆದು ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ.

ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ದಿನಾಂಕ: 23.06.2017 ರಂದು ಒಟ್ಟು 3376 ಬೋಧಕ/ಬೋಧಕೇತರ ಹುದ್ದೆಗಳಿಗೆ ನೇರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ್ದು, ಈ ಪೈಕಿ 1822 ಶಿಕ್ಷಕರ ಹುದ್ದೆಗಳಿರುತ್ತವೆ. ಆಯ್ಕೆಯಾದ ಅರ್ಹ 1484 ಶಿಕ್ಷಕರ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿರುತ್ತದೆ. ವಿಷಯವಾರು ಶಿಕ್ಷಕರ ಸಂಖ್ಯೆ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಪ್ರಸ್ತುತ ಸಂಘದ ವಸತಿ ಶಾಲೆ/ಕಾಲೇಜುಗಳಿಗೆ ಒಟ್ಟು 9756 ಬೋಧಕ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 5430 ಹುದ್ದೆಗಳು ಭರ್ತಿಯಾಗಿದ್ದು, 4326 ಹುದ್ದೆಗಳು ಖಾಲಿ ಇದ್ದು, ಈ ಪೈಕಿ 3201 ಹುದ್ದೆಗಳಿಗೆ ಅತಿಥಿ ಶಿಕ್ಷಕರು/ಉಪನ್ಯಾಸಕರುಗಳನ್ನು ಹಾಗೂ 480 ಹೊರಸಂಪನ್ಮೂಲದ ಶಿಕ್ಷಕರನ್ನು ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ತಾತ್ಕಾಲಿಕವಾಗಿ ಪಡೆದು ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ. (ಸಂಗೀತ ಮತ್ತು ಚಿತ್ರಕಲಾ ಶಿಕ್ಷಕರನ್ನು ಹೊರತುಪಡಿಸಿ)

| | | |
|---|---|---|
| | | ಸಂಘದ ಅಧೀನದಲ್ಲಿ ಖಾಲಿ ಇದ್ದ ಉಳಿಕೆ ಮೂಲ ವೃಂದದ 2756 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿಗಾಗಿ ಸಲ್ಲಿಸಲಾಗಿದ್ದು, ಆದೇಶ ಸಂಖ್ಯೆ: ಸಕಇ ಎಂಡಿಎಸ್ 418/2022 ದಿನಾಂಕ 29.06.2024 ರಲ್ಲಿ ಆರ್ಥಿಕ ಇಲಾಖೆಯು 875 ಹುದ್ದೆಗಳನ್ನು ಭರ್ತಿ ಮಾಡಲು ಸಹಮತಿಸಿದೆ. ಅದರಂತೆ ಉಳಿಕೆ ಮೂಲ ವೃಂದದ 875, ಹಿಂಬಾಕಿ 49 ಮತ್ತು ಕಲ್ಯಾಣ ಕರ್ನಾಟಕ ವೃಂದದ 396 ಹುದ್ದೆಗಳು ಸೇರಿದಂತೆ ಒಟ್ಟು 1320 ಬೋಧಕ/ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, 1087 ಶಿಕ್ಷಕರ ಹುದ್ದೆಗಳಿಗೆ ದಿನಾಂಕ:10-07-2026 ರಂದು ನೇರ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಉಳಿದ ಬೋಧಕೇತರ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕ್ರಮವಹಿಸಲಾಗುತ್ತಿದೆ. |
| ಇ) | ರಾಜ್ಯದ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (KREIS) ವ್ಯಾಪ್ತಿಯ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಶೂ ಭಾಗ್ಯ ಯೋಜನೆಯಡಿ ಒದಗಿಸಲಾಗುವ ಶೂ ಮತ್ತು ಸಾಕ್ಸ್ ಅನ್ನು ರಾಜ್ಯದ ದಲಿತ ಕುಶಲಕರ್ಮಿಗಳಿಂದ ಖರೀದಿಸಲಾಗಿದೆಯೇ; ಖರೀದಿಸಿದ್ದರೆ, ಎಷ್ಟು ಉದ್ಯಮಿಗಳಿಂದ ಎಷ್ಟು ಮೊತ್ತಕ್ಕೆ ಖರೀದಿಸಲಾಗಿದೆ; (ಮಾಹಿತಿ ನೀಡುವುದು) | 2024-25 ನೇ ಸಾಲಿನಲ್ಲಿ ಶೂ, ಸಾಕ್ಸ್, ಟೈ ಮತ್ತು ಬೆಲ್ಟ್ ಗಳನ್ನು ಒಟ್ಟು ರೂ.17,38,89,596/- ಗಳ ವೆಚ್ಚದಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಕಲಂ 4(ಜಿ) ವಿನಾಯಿತಿ ಪಡೆದಿರುವ ಡಾ\|\| ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ಇವರಿಂದ ಪಡೆಯಲಾಗಿರುತ್ತದೆ.<br><br>2025-26ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆ/ ಕಾಲೇಜುಗಳಲ್ಲಿನ 6 ಮತ್ತು 11 ನೇ ತರಗತಿಯ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್, ಟೈ ಮತ್ತು ಬೆಲ್ಟ್ ಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಕಲಂ 4(ಜಿ) ವಿನಾಯಿತಿ ಪಡೆದಿರುವ ಡಾ\|\| ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ 6ನೇ ತರಗತಿಗೆ ಕಂದಾಯ ವಿಭಾಗವಾರು ಪ್ರತ್ಯೇಕವಾಗಿ ಆದೇಶ ನೀಡಿದ್ದು, ಒಟ್ಟು ರೂ.3.32 ಕೋಟಿ ಮತ್ತು 11ನೇ ತರಗತಿಗೆ ರೂ 46.76 ಲಕ್ಷಗಳ ಮೊತ್ತದಲ್ಲಿ ಸರಬರಾಜು ಆದೇಶ ನೀಡಿದ್ದು, ಪೂರ್ಣ ಪ್ರಮಾಣದಲ್ಲಿ ಸರಬರಾಜಾಗಿರುತ್ತದೆ.<br><br>ಉಳಿದ ತರಗತಿಯ ವಿದ್ಯಾರ್ಥಿಗಳಿಗೆ ಕಂದಾಯ ವಿಭಾಗವಾರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಟೆಂಡರ್ ಆಹ್ವಾನಿಸಿ ಅರ್ಹ ಬಿಡ್‌ದಾರರಿಗೆ ಸರಬರಾಜು ಆದೇಶ ನೀಡಲಾಗಿರುತ್ತದೆ.<br><br>ಬೆಂಗಳೂರು ಮತ್ತು ಬೆಳಗಾವಿ ಕಂದಾಯ ವಿಭಾಗಕ್ಕೆ ದಿನಾಂಕ:29.11.2025ರಂದು M/s Surya Designs ಇವರಿಗೆ ಕ್ರಮವಾಗಿ ರೂ. 3.40 ಕೋಟಿ ಮತ್ತು ರೂ. 2.88 ಕೋಟಿ ಸರಬರಾಜು ಆದೇಶ ನೀಡಲಾಗಿದೆ. ಮೈಸೂರು ಕಂದಾಯ ವಿಭಾಗಕ್ಕೆ ದಿನಾಂಕ: 02.12.2025 ರಂದು M/s Kendriya Bhandara ಇವರಿಗೆ ರೂ.3.14 ಕೋಟಿ ಸರಬರಾಜು ಆದೇಶ ನೀಡಲಾಗಿದೆ. ಕಲಬುರ್ಗಿ ಕಂದಾಯ ವಿಭಾಗಕ್ಕೆ ದಿನಾಂಕ: 02.12.2025 ರಂದು M/s Kendriya Bhandara ಇವರಿಗೆ ರೂ 3.24 ಕೋಟಿ ಸರಬರಾಜು ಆದೇಶ ನೀಡಲಾಗಿದೆ. ಪೂರ್ಣ ಪ್ರಮಾಣದಲ್ಲಿ ಸರಬರಾಜಾಗಿರುತ್ತದೆ.<br><br>2026-27ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆ/ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್, ಟೈ ಮತ್ತು ಬೆಲ್ಟ್ ಗಳನ್ನು ಒದಗಿಸಲು ಆದೇಶ ಸಂಖ್ಯೆ: ಸಕಇ 18 ಎಂಡಿಎಸ್ 2026, ದಿನಾಂಕ:23.04.2026 ರಂತೆ ಒಟ್ಟು ರೂ.19,78,32,010/- ಗಳ ವೆಚ್ಚದಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ |

| | | |
|---|---|---|
| | | ಕೆಪಿಪಿಪಿ ಪೋರ್ಟಲ್ ಮುಖಾಂತರ ದಿನಾಂಕ:03.07.2026 ರಂದು ಮರು ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. |
| **ಈ)** | ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ವಿದ್ಯಾರ್ಥಿ ನಿಲಯಗಳಲ್ಲಿ ಭ್ರಷ್ಟಾಚಾರ, ಕಳಪೆ ಆಹಾರ ಸಾಮಗ್ರಿ ಪೂರೈಕೆ, ಮೂಲಸೌಕರ್ಯ ಕೊರತೆ ಹಾಗೂ ಕರ್ತವ್ಯ ಲೋಪದಲ್ಲಿ ದಾಖಲಾಗಿರುವ ಪ್ರಕರಣಗಳು ಎಷ್ಟು; ಈ ಕುರಿತು ಕೈಗೊಂಡಿರುವ ಕ್ರಮಗಳೇನು? | ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ವಿದ್ಯಾರ್ಥಿನಿಲಯಗಳಲ್ಲಿ ಭ್ರಷ್ಟಾಚಾರ, ಕಳಪೆ ಆಹಾರ ಸಾಮಗ್ರಿ ಪೂರೈಕೆ, ಮೂಲಸೌಕರ್ಯ ಕೊರತೆ ಹಾಗೂ ಕರ್ತವ್ಯ ಲೋಪದಡಿ ಒಟ್ಟು 54 ಪ್ರಕರಣಗಳು ದಾಖಲಾಗಿರುತ್ತದೆ. ಇದರಲ್ಲಿ 23 ಪ್ರಕರಣಗಳು ಮುಕ್ತಾಯಗೊಂಡಿದ್ದು, ಪ್ರಸ್ತುತ 31 ಪ್ರಕರಣಗಳಲ್ಲಿ ಇಲಾಖಾ ವಿಚಾರಣೆ ಚಾಲ್ತಿಯಲ್ಲಿರುತ್ತದೆ.<br><br>ಮುಕ್ತಾಯಗೊಂಡ ಒಟ್ಟು 23 ಪ್ರಕರಣಗಳ ಪೈಕಿ ಆರೋಪ ಸಾಬೀತಾದ 9 ಪ್ರಕರಣಗಳಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ - 1957 ರ ನಿಯಮ 8 (iii) ರಡಿ "ವಾರ್ಷಿಕ ವೇತನ ಬಡ್ತಿಯನ್ನು" ತಡೆಹಿಡಿಯಲಾಗಿರುತ್ತದೆ ಹಾಗೂ 8 ಪ್ರಕರಣಗಳಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ - 1957 ರ ನಿಯಮ 8 (ii) ರಡಿ "ವಾಗ್ದಂಡನೆ" ವಿಧಿಸಲಾಗಿರುತ್ತದೆ. ಅಲ್ಲದೇ ಉಳಿದ 6 ಪ್ರಕರಣಗಳಲ್ಲಿ "ಎಚ್ಚರಿಕೆ" ನೀಡಲಾಗಿರುತ್ತದೆ.<br><br>ಚಾಲ್ತಿಯಲ್ಲಿರುವ ಒಟ್ಟು 31 ಪ್ರಕರಣಗಳ ಪೈಕಿ 6 ಪ್ರಕರಣಗಳಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ - 1957 ರ ನಿಯಮ 12 (1) ಎ ರಡಿ ಹಾಗೂ 22 ಪ್ರಕರಣಗಳಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ - 1957 ರ ನಿಯಮ 11 ರಡಿ ಆರೋಪ ಪಟ್ಟಿಯನ್ನು ಜಾರಿಗೊಳಿಸಲಾಗಿರುತ್ತದೆ. 03 ಪ್ರಕರಣಗಳಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ - 1957 ರ ನಿಯಮ 10 (1) ಡಿ ರಡಿ ನೌಕರರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ.<br><br>ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ - 1957 ರ ನಿಯಮ 12 (1) ಎ ರಡಿಯ 6 ಪ್ರಕರಣಗಳ ಪೈಕಿ 1 ಪ್ರಕರಣದಲ್ಲಿ ಆರೋಪ ಪಟ್ಟಿಯ ವಿರುದ್ಧ ಮಾನ್ಯ ಕೆ.ಎ.ಟಿ ಇಲ್ಲಿ ಪ್ರಕರಣ ದಾಖಲಾಗಿರುತ್ತದೆ. ಇಲಾಖೆಯಿಂದ ಆಕ್ಷೇಪಣಾ ಹೇಳಿಕೆ ದಾಖಲಿಸಿದ್ದು, ಪ್ರಸ್ತುತ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. 1 ಪ್ರಕರಣದಲ್ಲಿ ಲೋಕಾಯುಕ್ತ ಕಛೇರಿಯಿಂದ ಸ್ವಯಂ ಪ್ರೇರಿತ ದೂರಿನ ಪ್ರಸ್ತುತ ಹಂತದ ಮಾಹಿತಿ ಸ್ವೀಕೃತಗೊಳ್ಳಲು ಬಾಕಿಯಿರುತ್ತದೆ. 3 ಪ್ರಕರಣಗಳಿಗೆ ಅಧಿಕಾರಿ/ ನೌಕರರಿಂದ ಸಮಜಾಯಿಷಿ ಸ್ವೀಕೃತಗೊಂಡಿದ್ದು, ಅಂತಿಮ ಆದೇಶ ಹೊರಡಿಸಲು ಪರಿಶೀಲನೆಯಲ್ಲಿರುತ್ತದೆ. ಉಳಿದ 1 ಪ್ರಕರಣದಲ್ಲಿ ನೌಕರರಿಂದ ಸಮಜಾಯಿಷಿ ಸ್ವೀಕೃತಗೊಳ್ಳಲು ಬಾಕಿಯಿರುತ್ತದೆ.<br><br>ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ - 1957 ರ ನಿಯಮ 11 ರಡಿಯ 22 ಪ್ರಕರಣಗಳ ಪೈಕಿ 1 ಪ್ರಕರಣದಲ್ಲಿ ಮಾನ್ಯ ಕೆ.ಎ.ಟಿ ಆದೇಶದಂತೆ ಅಂತಿಮ ಆದೇಶ ಹೊರಡಿಸಲು ಬಾಕಿ ಇರುತ್ತದೆ. 11 ಪ್ರಕರಣಗಳಲ್ಲಿ ವಿಚಾರಣಾಧಿಕಾರಿಗಳಿಂದ ಇಲಾಖಾ ವಿಚಾರಣೆ ಚಾಲ್ತಿಯಲ್ಲಿರುತ್ತದೆ. 5 ಪ್ರಕರಣಗಳಲ್ಲಿ ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿ ಸ್ವೀಕೃತಗೊಂಡಿದ್ದು, ಅಂತಿಮ ಆದೇಶ ಹೊರಡಿಸಲು ಪರಿಶೀಲನೆಯಲ್ಲಿರುತ್ತದೆ. 4 ಪ್ರಕರಣಗಳಲ್ಲಿ ವಿಚಾರಣಾಧಿಕಾರಿ/ ಮಂಡನಾಧಿಕಾರಿಗಳನ್ನು ನೇಮಿಸಲು ಕ್ರಮವಹಿಸಲಾಗಿರುತ್ತದೆ. ಉಳಿದ 1 ಪ್ರಕರಣದಲ್ಲಿ ನೌಕರರಿಂದ ಸಮಜಾಯಿಷಿ ಸ್ವೀಕೃತಗೊಳ್ಳಲು ಬಾಕಿಯಿರುತ್ತದೆ. |

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿನ ಕಲಬುರಗಿ ಜಿಲ್ಲೆಯ ಮುದೋಳ ಮತ್ತು ಕರ್ಜಗಿ ಎರಡು ವಸತಿ ಶಾಲೆಗಳಲ್ಲಿ ಪ್ರಕರಣಗಳು ವರದಿಯಾಗಿರುತ್ತದೆ.

ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ದಿನಾಂಕ:01-08-2026 ರಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾ-319), ಕರಜಗಿ, ಅಫಜಲಪುರ ತಾಲ್ಲೂಕಿನ ವಸತಿ ಶಾಲೆಯ ಪ್ರಾಂಶುಪಾಲರು ಹಾಗೂ ನಿಲಯಪಾಲಕರನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮವಳಿ- 1957ರ ನಿಯಮ 10(1)ರಡಿ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತುಗೊಳಿಸಲಾಗಿರುತ್ತದೆ. ಸದರಿ ವಸತಿ ಶಾಲೆಯ ಹೊರಸಂಪನ್ಮೂಲ ಅಡುಗೆ ಸಿಬ್ಬಂದಿಗಳನ್ನು ಸಂಬಂಧಿಸಿದ ಹೊರಸಂಪನ್ಮೂಲ ಏಜೆನ್ಸಿಗೆ ಹಿಂದಿರುಗಿಸಲು ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ ಜಿಲ್ಲೆ ಇವರಿಗೆ ಸೂಚಿಸಲಾಗಿರುತ್ತದೆ.

ದಿನಾಂಕ:10-8-2026 ರಲ್ಲಿ ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ (ಪ.ಜಾ-636), ಮುಧೋಳ, ಸೇಡಂ ತಾಲ್ಲೂಕಿನ ವಸತಿ ಶಾಲೆಯ ಪ್ರಾಂಶುಪಾಲರು ಹಾಗೂ ಮೂವರು ಶಿಕ್ಷಕರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಲಾಗಿದೆ. ಸದರಿ ಪ್ರಕರಣಗಳಲ್ಲಿ ಮುಂದಿನ ಅಗತ್ಯ ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳಲಾಗುತ್ತಿದೆ.

ದಿನಾಂಕ:3-8-2026 ರಲ್ಲಿ ಮೆ|| ಶಿವಶಕ್ತಿ ದಾಲ್ ಇಂಡಸ್ಟ್ರೀಸ್ ಇವರಿಗೆ ಸಮರ್ಪಕ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಬೇಕೆಂದು ಕಾರಣ ಕೇಳಿ ನೋಟೀಸ್ ನೀಡಲಾಗಿರುತ್ತದೆ.

ಮೆ|| ಶಿವಶಕ್ತಿ ದಾಲ್ ಇಂಡಸ್ಟ್ರೀಸ್ ಇವರ ಸಮಜಾಯಿಷಿ ಪತ್ರ ದಿನಾಂಕ: 04-08-2026 ರಲ್ಲಿ ಸರಬರಾಜು ಮಾಡಿರುವ ಸಾಮಗ್ರಿಗಳು ಸುಮಾರು 20-25 ದಿನಗಳವರೆಗೆ ಬಳಸದೇ ಇರುವುದರಿಂದ, ಮಳೆಗಾಲ ವಾತಾವರಣದಿಂದ ಅವಲಕ್ಕಿಯು ಹಸಿ ಹಿಡಿದು ಹಾಳಾಗಿದ್ದರೂ ಸಹ ವಾಸನೆ ಬರುತ್ತಿರುವ ಅವಲಕ್ಕಿಯನ್ನು ಗ್ರೂಪ್ ಡಿ ಸಿಬ್ಬಂದಿಗಳು ಸ್ವಚ್ಛ ಮಾಡದೇ ಉಪಹಾರಕ್ಕೆ ಬಳಸಿರುವುದರಿಂದ ಈ ರೀತಿಯ ಘಟನೆ ಸಂಭವಿಸಿರುತ್ತದೆ ಎಂದು ಸರಬರಾಜುದಾರರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

**SWD/289/MDS/2026**

(ಕೆ.ಹೆಚ್.ಮುನಿಯಪ್ಪ)

ಸಮಾಜ ಕಲ್ಯಾಣ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 925(78)ಕ್ಕೆ ಅನುಬಂಧ-1

## STUDENT DEATH DETAILS FROM JANUARY 2024-UP TO JULY- 2026 (MEDICAL)

| Sl. No | District | School Code | School category | School Address | Death student name | Male/Female | Standard | Death Year | Death date | MEDICAL / ACCIDENTAL/ SUICIDE | Reason of Death |
|---|---|---|---|---|---|---|---|---|---|---|---|
| 1 | BALLARI | 333 | BC | MDRS METRIKI ,SANDUR TQ | AJEYA KUMAR | M | 6th | 2026 | 12.03.2026 | Medical-illness | HEALTH ISSUES |
| 2 | Belagavi | 442 | SC | KRCRS, Chamakerimaddi Sankonatti Athani | Dhanashree Ravindra Gasta | F | 8th | 2026 | 02.01.2026 | Medical-illness | Cardiac Arrest |
| 3 | | 236 | BC | MDRS GAVANA | PARAS SUDHAKAR THODAKARA | M | 10 | 2024 | 06.04.2024 | Medical | HEART ATTACK |
| 4 | Mandya | 180 | BC | MDRS Babybetta(BC-180), Pandavapura Tq | Tejashwini H M | F | 9th | 2025 | 14-09-2025 | Medical-illness | Heart Attack |

## STUDENT DEATH DETAILS FROM JANUARY 2024-UP TO JULY- 2026 (SUICIDE)

| Sl.No | District | School Code | School category | School Address | Death student name | Male/Female | Standard | Death Year | Death date | MEDICAL / ACCIDENTAL/ SUICIDE | Reason of Death |
|---|---|---|---|---|---|---|---|---|---|---|---|
| 1 | CHIKKA MAGAL URU | 124 | SC | MORARJI DESAI RESIDENTIAL SCHOOL HARANDUR | SHAMITHA S | F | 9th | 2025 | 28.06.2025 | Sucide | Suicide by Hang |
| 2 | KALABU RAGI | 636 | SC | IGRS MUDHOL, SEDAM TALUK | NARAYANA RATHOD | M | 7th | 2025 | 10.07.2025 | Sucide | HANG TO FAN |
| 3 | Tumkur u | 86 | SC | MDRS (SC_86) Narasapura Hebburu Tumkuru. | Likhit G J | M | 8th | 2025 | 16.01.2025 | Sucide | Drank Pesticide s |

| | | | | | | | | | | | |
|---|---|---|---|---|---|---|---|---|---|---|---|
| 4 | UTTARA KANNA DA | 570 | SC | IGRS, MADANAKALA, SIDDAPURA, UTTARA KANNADA | GOKUL KRISHNA GOWDA | M | 10th | 2026 | 09.06.202 6 | Sucide | HANGED TO WINDO W GRILLS |

## STUDENT DEATH DETAILS FROM JANUARY 2024-UP TO JULY- 2026 (ACCIDENTAL)

| Sl.N o | District | School Code | School catego ry | School Address | Death student name | Male/F emale | Stan dard | Death Year | Death date | ACCIDENTAL | Reason of Death |
|---|---|---|---|---|---|---|---|---|---|---|---|
| 1 | Belagav i | 221 | BC | MDRS SADALAGA | Krishna Manjunat h Hegade | M | 7th | 2025 | 18.12.202 5 | Accidental | Current shock |
| 2 | | 211 | BC | MDRS Hidakal Dam, Hukkeri | Karthika Manjunat ha Gadivadd ar | M | 8th | 2026 | 13.01.202 6 | Accidental | Drowned in Canal / Channel while swimming |
| 3 | CHAMA RAJANA GARA | 189 | SC | YADAVANAHALLI | MANITH S | M | 7th | 2025 | 02.01.202 5 | Accidental | FELL DOWN NEAR HOSTEL |
| 4 | CHIKKA MAGAL URU | 122 | SC | MDRS(SC-122), KUPPALU, KADUR TQ, CHIKKAMAGALURU | AKASH T | M | 7th | 2024 | 15-06-2024 | Accidental | CURRENT SHOCK |
| 5 | KOLAR | 140 | SC | MDRS(140) M KOTTURU, MULABAGILU TQ KOLAR DIST | SHRAVAN TI | F | 9th | 2024 | 10-12-2024 | Accidental | DEATH CAUSE IN MURUDES HWAR BEACH |
| 6 | | 140 | SC | MDRS(140) M KOTTURU, MULABAGILU TQ KOLAR DIST | DEEKSHA | F | 9th | 2024 | 10-12-2024 | Accidental | DEATH CAUSE IN MURUDES HWAR BEACH |
| 7 | | 140 | SC | MDRS(140) M | VANDAN | F | 9th | 2024 | 10-12- | Accidental | DEATH |

| | | | | | | | | | | | |
|---|---|---|---|---|---|---|---|---|---|---|---|
| | | | | KOTTURU, MULABAGILU TQ KOLAR DIST | A | | | | 2024 | | CAUSE IN MURUDES HWAR BEACH |
| 8 | | 140 | SC | MDRS(140) M KOTTURU, MULABAGILU TQ KOLAR DIST | LAVANYA | F | 9th | 2024 | 10-12-2024 | Accidental | DEATH CAUSE IN MURUDES HWAR BEACH |
| 9 | RAICHUR | 826 | SC | DBRARS GUNJAHALLI | Abhishek | M | 10th | 2025 | 15.08.2025 | Accidental | Accident |

ಕಾರ್ಯನಿರ್ವಾಹಕ ನಿರ್ದೇಶಕರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 925(78)ಕ್ಕೆ ಅನುಬಂಧ-2**

| ಕ್ರ ಸಂ | ವಿಷಯ | ಕೆ.ಪಿ.ಎಸ್.ಸಿ ಯಿಂದ ಆಯ್ಕೆಯಾದ ಅಂತಿಮ ಪಟ್ಟಿ | ನೇಮಕಾತಿ ಆದೇಶ ಹೊರಡಿಸಿರುವ ಸಂಖ್ಯೆ |
|---|---|---|---|
| 1 | ಕನ್ನಡ ಭಾಷಾ ಶಿಕ್ಷಕರು | 248 | 232 |
| 2 | ಆಂಗ್ಲ ಭಾಷೆ ಶಿಕ್ಷಕರು | 272 | 150 |
| 3 | ಹಿಂದಿ ಭಾಷಾ ಶಿಕ್ಷಕರು | 181 | 143 |
| 4 | ಗಣಿತ ಶಿಕ್ಷಕರು | 156 | 113 |
| 5 | ವಿಜ್ಞಾನ ಶಿಕ್ಷಕರು. | 259 | 249 |
| 6 | ಸಮಾಜ ವಿಜ್ಞಾನ | 2276 | 212 |
| 7 | ಕಂಪ್ಯೂಟರ್ ಶಿಕ್ಷಕರು | 217 | 209 |
| 8 | ದೈಹಿಕ ಶಿಕ್ಷಣ ಶಿಕ್ಷಕರು | 178 | 176 |
| | ಒಟ್ಟು | **1738** | **1484** |

for ಕಾರ್ಯನಿರ್ವಾಹಕ ನಿರ್ದೇಶಕರು